# ‘ಫ್ರೆಂಚ್ ಕನೆಕ್ಷನ್’ ಗಿಲಾಮೆ

ಇದೊಂದು ಹೊಸ ಅಂಕಣ. ಪ್ರತಿ ಎರಡು ವಾರಕ್ಕೊಮ್ಮೆ ಈ ಅಂಕಣದಲ್ಲಿ ನಿಮ್ಮ ಮುಂದೆ ಅವತರಿಸುತ್ತಾರೆ ಎಲ್ಲಿಂದಲೋ ಬಂದವರು!



ಪತ್ನಿ ಅಮೇಲಿ, ಮಕ್ಕಳಾದ ಕೈಲಾಶ್ ಮತ್ತು ಮಾಯಾ ಜತೆಗೆ ಗಿಲಾಮೆ ಗೆವ್ರೆ

ಕನ್ನಡ ನಾಡಿನ ಅಂದ ಚೆಂದಗನ್ನು ಬಣ್ಣಿಸಿ ಸಾಕಷ್ಟು ಹಾಡುಗಳು ಬಂದದಿವೆ. ದೂರದ ಫ್ರಾನ್ಸ್‌ನಿಂದ ಬಂದಿರುವ ಗಿಲಾಮೆ ಗೆವ್ರೆ ಈ ಯಾವ ಹಾಡುಗಳನ್ನೂ ಕೇಳಿಸಿಕೊಂಡಿಲ್ಲ. ಆದರೆ ಅವರ ಮಟ್ಟಿಗೆ ಕನ್ನಡ ನಾಡು ನಿಜಕ್ಕೂ ಚಂದಕಿಂತ ಚಂದ!

ಗಿಲಾಮೆ ಗೆವ್ರೆ ಅವರಿಗೀಗ 37ರ ಹರೆಯ. 14 ವರ್ಷಗಳ ಹಿಂದೆ ವಿದ್ಯಾರ್ಥಿಯಾಗಿ ಬೆಂಗಳೂರಿಗೆ ಬಂದವರು, ಈಗ ಬೆಂಗಳೂರಿನ ಪರ್ಮನೆಂಟ್ ನಿವಾಸಿ! ‘ಈ ಸಿಲಿಕಾನ್ ಸಿಟಿಯಲ್ಲಿ ಉದ್ಯೋಗಾವಕಾಶ, ಉತ್ತಮ ವಿದ್ಯಾಭ್ಯಾಸ ಸೌಲಭ್ಯಗಳಿವೆ, ವೈವಿಧ್ಯಮಯ ಜನರಿದ್ದಾರೆ’ ಎಂದು ಅಂತರ್ಜಾಲದಲ್ಲಿ ಓದಿಕೊಂಡು ಇಲ್ಲಿಗೆ ಬಂದ ಗಿಲಾಮೆಗೆ ಈಗ ಬೆಂಗಳೂರೇ ಕೇಂದ್ರ ನಿವಾಸ. ಉದ್ಯೋಗ ಅರಸಿಕೊಂಡು ಬಂದ ಗಿಲಾಮೆ ಈಗ ನೂರಾರು ಜನರಿಗೆ ತಾವೇ ಉದ್ಯೋಗ ಒದಗಿಸಿದ್ದಾರೆ. ‘ಸಿ ಟು ಸಿ ಕನ್ಸಲ್ಟಿಂಗ್ ಆ್ಯಂಡ್ ಟ್ರೈನಿಂಗ್ ಪ್ರೈ. ಲಿಮಿಟೆಡ್’ ಕಂಪೆನಿಯ ಮಾಲೀಕ. ಐಟಿ, ಬಿಪಿಒ, ಕನ್ಸಲ್ಟಿಂಗ್ ಕಂಪೆನಿಗಳಿಗೆ ಕಲಿಕೆ, ಅಭಿವೃದ್ಧಿ ಮತ್ತು ಕೌಶಲ ಮುಂತಾದ ಮಾನವ ಸಂಪನ್ಮೂಲ ವಿಷಯಗಳ ಬಗ್ಗೆ ತರಬೇತಿ ನೀಡುವ ಕೆಲಸ ಅವರ ಕಂಪೆನಿಯದ್ದು. ಇದರ ಶಾಖೆಗಳು ಮಲೇಶಿಯಾ, ಚೀನಾ, ಸಿಂಗಾಪುರ ಮತ್ತು ಅಮೆರಿಕಗಳಲ್ಲೂ ಇವೆ.

‘2000ನೇ ಇಸವಿಯಲ್ಲಿ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ‘ಫ್ರೆಂಚ್ ಭಾಷಾ ವಿನಿಮಯ ವಿದ್ಯಾರ್ಥಿ’ ಆಗಿ ಸೇರಿದೆ. ಫ್ರಾನ್ಸ್‌ಗಿಂತ ಇಲ್ಲಿ ಅವಕಾಶಗಳು ಹೆಚ್ಚು. ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ, ಪ್ರವಾಸಿ ತಾಣವಾಗಿ ಬೆಂಗಳೂರು ಹೆಸರುವಾಸಿ’ ಎನ್ನುವುದು ಗಿಲಾಮೆ ಸ್ಪಷ್ಟ ಅಭಿಪ್ರಾಯ.

ಬೆಂಗಳೂರೇ ಏಕೆ..? ಮುಂಬಯಿ, ಚೆನ್ನೈ, ದೆಹಲಿಗಳಲ್ಲೂ ಅವಕಾಶಗಳಿಲ್ಲವೇ?

‘ಮುಂಬಯಿಯಲ್ಲಿ ಜನಸಂಖ್ಯೆ ಮತ್ತು ಟ್ರಾಫಿಕ್ ಒತ್ತಡ ಹೆಚ್ಚು. ಚೆನ್ನೈಯ ಬಿಸಿಲು, ಬೇಸಿಗೆ ತಡೆಯಲಾಗದು, ದೆಹಲಿಯ ಚಳಿ ಸಹಿಸಲಾಗದು. ನಮ್ಮ ಬೆಂಗಳೂರು ಹಾಗಲ್ಲ ನೋಡಿ...’ ಎಂದು ನಗುತ್ತಾರೆ.

ಅವರು ‘ನಮ್ಮ ಬೆಂಗಳೂರು’ ಎನ್ನಲೂ ಕಾರಣವಿದೆ. ‘ಇನ್ನು ಬೆಂಗಳೂರಿನಲ್ಲಿ ಖಾಯಂ ಆಗಿ ನೆಲೆಸಲು ನಿರ್ಧರಿಸಿದ್ದೇವೆ. ಇದೇ ನಮ್ಮ ಹೋಮ್ ಟೌನ್. ವಾಪಸ್ ಫ್ರಾನ್ಸಿಗೆ ಹೋಗಿ ನೆಲೆ ನಿಲ್ಲುವ ಯೋಚನೆಯೇ ಇಲ್ಲ!’

ಹಂಪಿ, ಮೈಸೂರು, ಶ್ರವಣಬೆಳಗೊಳ, ಬೈಲುಕುಪ್ಪೆ ಎಲ್ಲ ಕಡೆ ಓಡಾಡಿದ್ದೇವೆ. ಗೋವಾ, ಪುಣೆ, ಮುಂಬಯಿ, ಚೆನ್ನೈಗಳಿಗೆ ಆಗಾಗ ಪ್ರವಾಸ ಹೋಗುತ್ತಿರುತ್ತೇವೆ. ಆಗ್ರಾದ ತಾಜ್‌ಮಹಲ್ ಅಂತೂ ಅತ್ಯದ್ಭುತ! ‘ಬೆಂಗಳೂರಿನ ವಿಶೇಷವೆಂದರೆ ಇಲ್ಲಿ ಎಲ್ಲ ಧರ್ಮಗಳ, ಸಂಸ್ಕೃತಿಯ ಜನರೂ ಇಲ್ಲಿದ್ದಾರೆ. ನಾನು ದೇವರನ್ನು ನಂಬುವುದಿಲ್ಲ. ಆದರೆ ಇಲ್ಲಿನ ಎಲ್ಲ ಧರ್ಮಗಳ ಬಗ್ಗೆ ಕುತೂಹಲವಿದೆ. ನನ್ನ ಮಕ್ಕಳು ಹುಟ್ಟಿ ಬೆಳೆದದ್ದು, ಶಾಲೆಗೆ ಹೋಗುವುದು ಇಲ್ಲೇ ಆದ್ದರಿಂದ ಸಹಜವಾಗಿ ಅವರಿಗೆ ಇಲ್ಲಿನ ಸಂಸ್ಕೃತಿ, ಜೀವನಶೈಲಿ ಬಂದಿದೆ. ಮಕ್ಕಳು ಚೆನ್ನಾಗಿ ಹಿಂದಿಯನ್ನೂ, ಅಲ್ಪಸ್ವಲ್ಪ ಕನ್ನಡವನ್ನೂ ಮಾತನಾಡುತ್ತಾರೆ. ನನಗೂ ಸ್ವಲ್ಪ ಸ್ವಲ್ಪ ಕನ್ನಡ ಬರುತ್ತದೆ. ಆದರೆ ಸರಾಗವಾಗಿ ಮಾತನಾಡಲು, ಓದಲು ಬರುವುದಿಲ್ಲ. ಕಲಿಯಬೇಕು. ಕೆಲಸದ ಒತ್ತಡದಿಂದಾಗಿ ಸಮಯ ಸಿಗುತ್ತಿಲ್ಲ!’

ಬೆಂಗಳೂರಿಗೆ ಬಂದ ಮೂರು ವರ್ಷಗಳ ಬಳಿಕ ಫ್ರಾನ್ಸ್ ಮೂಲದ ಅಮೇಲಿಯನ್ನು ಗಿಲಾಮೆ ಮದುವೆಯಾದರು. ಈಗ ಆರು ವರ್ಷದ ಮಗ ಕೈಲಾಶ್, ನಾಲ್ಕು ವರ್ಷದ ಮಗಳು ಮಾಯಾ ಜತೆಗಿದ್ದಾರೆ. ಮಕ್ಕಳಿಗೆ ಗಿಲಾಮೆ ಇಲ್ಲಿಯ ದೇವರ ಹೆಸರನ್ನೇ ಇಟ್ಟಿದ್ದಾರೆ. ‘ಈ ಹೆಸರಿನ ಅರ್ಥ ನನಗೆ ಇಷ್ಟವಾಗಿದೆ. ಹಬ್ಬ ಹರಿದಿನಗಳ ಆಚರಣೆ ಇಲ್ಲ. ಆದರೆ ಇಲ್ಲಿರುವ ಮಿತ್ರರು ಹಬ್ಬದ ದಿನ ಊಟಕ್ಕೆ ಕರೆದರೆ ಹೆಂಡತಿ ಮಕ್ಕಳ ಸಮೇತ ಹೋಗುತ್ತೇನೆ’ ಎಂದು ನಗುತ್ತಾರೆ.

‘ಫ್ರಾನ್ಸ್‌ನಲ್ಲಿ ಬರೀ ಪಾಸ್ತ, ಬೇಕ್ ಫುಡ್, ನೂಡಲ್ಸ್! ಇಲ್ಲೋ ಎಷ್ಟೊಂದು ಊಟ ವೈವಿಧ್ಯ! ಮಸಾಲೆ ದೋಸೆ, ಮಟನ್ ಬಿರಿಯಾನಿ, ರೊಟ್ಟಿ ಎಲ್ಲವೂ ನಮಗೆ ಇಷ್ಟ. ಉಡುಪಿ ಹೋಟೆಲ್ ಅಡುಗೆ ಸಖತ್ ರುಚಿಯಾಗಿರುತ್ತದೆ. ವುಡ್‌ಲ್ಯಾಂಡ್ ಹೋಟೆಲ್‌ನ ಥಾಲಿ, ಕಬಾಬ್ ವಂಡರ್‌ಫುಲ್’ ಎನ್ನುತ್ತಾರೆ ಗಿಲಾಮೆ.

ಸಾಮಾನ್ಯವಾಗಿ ಫ್ರೆಂಚರು ಇಂಗ್ಲಿಷ್ ಕಲಿಯಲು ಇಷ್ಟಪಡಲ್ಲ. ಆದರೆ ಗಿಲಾಮೆ ಚೆನ್ನಾಗಿ ಇಂಗ್ಲಿಷ್ ಕಲಿತಿದ್ದಾರೆ. ಫ್ರೆಂಚರು ಇಂಗ್ಲಿಷ್ ಬಗ್ಗೆ ಅವಜ್ಞೆ ತೋರುವಂತೆಯೇ ಇಲ್ಲಿ ತಮಿಳರು ಹಿಂದಿ ಇಷ್ಟಪಡಲ್ಲ ಎಂದು ಸಾಮ್ಯದ ಕಡೆಗೆ ಬೊಟ್ಟು ಮಾಡುತ್ತಾರೆ.

ಗಿಲಾಮೆ ನೆಂಟರು ಯಾರೂ ಇಲ್ಲಿಲ್ಲ. ‘ನನ್ನ ಅಪ್ಪ–ಅಮ್ಮ ವರ್ಷಕ್ಕೊಮ್ಮೆ ಬೆಂಗಳೂರಿಗೆ ಬಂದು ಹೋಗುತ್ತಾರೆ. ನಾವೂ ವರ್ಷಕ್ಕೊಮ್ಮೆ ಫ್ರಾನ್ಸ್‌ಗೆ ಹೋಗಿ ಬರುತ್ತೇವೆ. ಆದರೆ ಫ್ರಾನ್ಸ್ ನ ಸುಮಾರು 300 ಕುಟುಂಬಗಳು ಬೆಂಗಳೂರಿನಲ್ಲಿ ನೆಲೆಸಿವೆ’ ಎಂದು ಗಿಲಾಮೆ ಕಣ್ಣರಳಿಸುತ್ತಾರೆ.

★ **ಅವನೀಶ್**



(ಕಳೆದ ಏಳು ವರ್ಷಗಳಿಂದ ಇದೇ ಪುಟದಲ್ಲಿ ಪ್ರಕಟವಾಗುತ್ತಿದ್ದ ಮನೋವಿಜ್ಞಾನಿ ಡಾ.ಅ.ಶ್ರೀಧರ್ ಅವರ ಅಂಕಣ ‘ನಮ್ಮ ಮಕ್ಕಳು ಹೀಗೇಕೆ?’ ಕೊನೆಗೊಂಡಿದೆ.
– ಸಂ)